ಉಪಟಳ ಕೊಡುವ ಸೊಳ್ಳೆಯನ್ನು ಹಿಡಿಯಲು ಸೋತ ಸಿಂಹ ಆ ಸಂದರ್ಭದಲ್ಲಿ ಯಾವ ಪ್ರಾಣಿಯನ್ನಾದರೂ ಬೇಟೆಯಾಡಬಹುದು ಆದರೆ ಸೊಳ್ಳೆ ಶಿಕಾರಿ ಮಾತ್ರ ಸುಲಭದಲ್ಲ ಎಂದು ಅದಕ್ಕೆ ಅರಿವಾಗಿದ್ದಿರಬಹುದು. ದೇಹಕ್ಕಿಂತ ಬುದ್ಧಿ ಚುರುಕಾಗಿರಬೇಕು ಎಂಬುದಕ್ಕೆ ಈ ಕತೆ ಉದಾಹರಣೆಯಾದರೆ ರಾಜನ ಕಾವಲು ಕಾಯುವ ಮಂಗನಿಗೆ ಯಃಕಶ್ಚಿತ್ ಸೊಳ್ಳೆಯೊಂದನ್ನು ಓಡಿಸಲಿಕ್ಕಾಗದೆ ರಾಜನ ಮೈಮೇಲೆ ಗಾಯವಾಗುವಂತಹ ಸನ್ನಿವೇಶ ನಿರ್ಮಿಸಿದಾಗ ‘ದೇಹ ಸಣ್ಣದಾದರೂ ಪರಿಣಾಮ ದೊಡ್ಡದು’ ಎಂಬುದಕ್ಕೆ ಸೊಳ್ಳೆಗಿಂತ ಬೇರೆ ಒಳ್ಳೆಯ ಉದಾಹರಣೆ ಸಿಕ್ಕಿರಲಾರದು.



ರಾಮಾಯಣದಲ್ಲಿ ಹನುಮಂತನು ಸೀತೆಯನ್ನು ಅನ್ವೇಷಿಸುತ್ತ ಲಂಕೆಗೆ ಹೋದಾಗ ಅಲ್ಲಿಯ ಬಿಗಿಯಾದ ಕಾವಲಿನಲ್ಲಿ ತನ್ನನ್ನು ರಕ್ಷಿಸಿಕೊಳ್ಳಲು ಅವನು ತಾಳಿದ್ದು ಸೊಳ್ಳೆಯ ರೂಪ ಅಥವಾ ಸೊಳ್ಳೆಯಷ್ಟು ಕುಬ್ಜ ಆಕಾರದಲ್ಲಿ, ಅದೂ ರಾತ್ರಿಯಾಗುವುದನ್ನೇ ಕಾದು. ಅಂದರೆ ಸೊಳ್ಳೆಗಳು ತ್ರೇತಾಯುಗದ ಕಾಲದಿಂದಲೂ ಇದ್ದವು ಎಂದು ಧೈರ್ಯದಿಂದ ಹೇಳಬಹುದು. ಇದೇ ಕಾರಣಕ್ಕೆ ಅವು ಹನುಮಂತನಂತೆ ಚಿರಂಜೀವಿಗಳಾಗಿರಬೇಕೆಂಬುದು ನನ್ನ ಗುಂ(ಯ್)ಮಾನ!

ಇನ್ನು ಸರ್ಕಾರಗಳು ಮಳೆಗಾಲ ಬಂದರೆ ಈ ಕ್ರಿಮಿಗಳಿಗಾಗಿ ಕೋಟ್ಯಂತರ ರೂಪಾಯಿ ಮೀಸಲಿಡುತ್ತದೆ ಎಂದರೆ ಸೊಳ್ಳೆ ಎಂದರೆ ಸುಮ್ಮನೆಯಲ್ಲ ಎಂದು ತಿಳಿಯಬೇಕು. ಚಿಕುನ್‌ಗುನ್ಯಾ, ಆನೆಕಾಲು, ಡೆಂಗಿ, ಮಲೇರಿಯಾಗಳಂಥ ಮಾರಣಾಂತಿಕ ರೋಗಗಳಿಗೆ ಸೊಳ್ಳೆಗಳೇ ಕಾರಣವೆಂದು ಮನೆಮನೆಗೆ ಔಷಧಿ ಹೊಡೆಯುವವರನ್ನು, ಫಾಗಿಂಗ್ ಮಾಡುವವರನ್ನು ಕಳುಹಿಸಿಕೊಡುವುದಲ್ಲದೇ ಕಿಟಕಿ ಬಾಗಿಲುಗಳಿಗೆ ನೆಟ್ ಹಾಕಿಸಿಕೊಳ್ಳಿ, ಮೈಗೆ ಕ್ರೀಂ ಹಚ್ಚಿಕೊಳ್ಳಿ, ಸೊಳ್ಳೆ ಬ್ಯಾಟ್ ತಂದಿಟ್ಟುಕೊಳ್ಳಿ ಎಂಬುದು ಪತ್ರಿಕೆಗಳಲ್ಲಿ ಜಾಹೀರಾತುಗಳನ್ನು ನೀಡುತ್ತವೆ. ಆ ಜಾಹೀರಾತಿನಿಂದ ಅಂಗಡಿಯವರ ವ್ಯಾಪಾರ ಕುದುರಿ ಸೊಳ್ಳೆಗಳ ಸಂತತಿ ಸಾವಿರವಾಗಲಿ ಎಂದು ವ್ಯಾಪಾರಿಗಳು ಹಾರೈಸಿದರೂ ಸೊಳ್ಳೆ ಹೊಡೆಯಲು ಮನೆಯೊಳಗೆ ಬ್ಯಾಟ್ ಹಿಡಿದು ಕೊಹ್ಲಿ, ರೋಹಿತರಂತೆ ಸಿಕ್ಸರ್ ಫೋರ್ ಬೀಸಿ ಬೀಸಿ ನೆಟ್ ಪ್ರಾಕ್ಟೀಸ್ ಮಾಡಿ ಸುಸ್ತಾಗಿದ್ದೆ ಬಂತು ವಿನಃ ಮಚ್ಛರ್ ಗಾಯಬ್ ಆಗುವುದು ಗಮನಕ್ಕೆ ಬಾರದು. ಏಕೆಂದರೆ ಸಂಜೆಯಾದೊಡನೆ ಎಲ್ಲಾ ಕಿಟಕಿ ಬಾಗಿಲುಗಳನ್ನು ಗಪ್ಪಾಗಿ ಮುಚ್ಚಿದರೂ ಚಕ್ರವ್ಯೂಹ ಭೇದಿಸಿಕೊಂಡು ಬಂದ ಅಭಿಮನ್ಯುವಿನಂತೆ ಸೊಳ್ಳೆಗಳು ನುಗ್ಗಿಯೇ ನುಗ್ಗುವವು.

ವ್ಯಾಸರಾಯರು ತಮ್ಮ ಶಿಷ್ಯಂದಿರಿಗೆ ಯಾರೂ ಕಾಣದಿರುವ ಕಡೆ ಬಾಳೆಹಣ್ಣು ತಿಂದುಕೊಂಡು ಬರುವ ಟಾಸ್ಕ್ ನೀಡಿದಂತೆ ಸೊಳ್ಳೆಯಿಲ್ಲದ ಕಡೆ ತಿಂದು ಬನ್ನಿ ಎಂದರೂ ಕನಕದಾಸರು ತಿನ್ನದೆ ಹಾಗೇ ಬರುತ್ತಿದ್ದರೇನೋ?

‘ಕೇರಿಗೆ ಬಂದವಳು ನೀರಿಗೆ ಬಾರದಿರುವಳೆ’ ಎಂಬಂತೆ ಸಂಜೆಗೆ ಬಂದ ನೆಂಟ ಹಾಗೂ ಮಳೆ ಎರಡೂ ಹೋಗವು ಎಂಬಂತೆ ಸೊಳ್ಳೆಗಳೂ ಕೂಡ ಹೋಗವು. ಮನೆಗೆ ಬರುವ ನೆಂಟರು ‘ನಿಮ್ಮ ಮನೆಯಲ್ಲಿ ವೈಫೈ ಇದೆಯೇ?’ ಎಂದು ಕೇಳುವಂತೆ ‘ನಿಮ್ಮ ಮನೆಯಲ್ಲಿ ಸೊಳ್ಳೆಗಳಿವೆಯೇ?’ ಎಂದು ಕೇಳಿದರೂ ಅಚ್ಚರಿಯಿಲ್ಲ. ಹೊದಿಕೆ ಮುಸುಕು ಹಾಕಿಕೊಂಡು ಮಲಗಿದರೂ ಅರೆಹೊತ್ತಿನಲ್ಲಿಯೇ ಗುಂಯ್‌ಗುಡುತ್ತ ಕಿವಿ ಹತ್ತಿರ ಸಂಗೀತ ಹಾಡುವವರು ಸಂಸಾರ ಸಮೇತ ಹಾಜರಿ ಹಾಕದಿದ್ದರೆ ಸೊಳ್ಳೆಜನ್ಮಕ್ಕೆ ಅವಮಾನ!

ಪ್ರಾಣಿಗಳು ತಮಗೆ ಕಚ್ಚುವ ಸೊಳ್ಳೆಗಳನ್ನು ಬಾಲಗಳ ಮೂಲಕ ಹೊಡೆದೋಡಿಸಬಲ್ಲವು. ನಾಯಿ ತನ್ನ ಬಾಲದಲ್ಲಿರುವ ಸೊಳ್ಳೆಗಳನ್ನು ಹಿಡಿಯಲು 360 ಡಿಗ್ರಿ ಸುತ್ತುವುದನ್ನು ಆಗಾಗ ಕಾಣುವೆವು. ಆದರೆ ನಾವು ನಮ್ಮೆರಡು ಕೈಗಳು, ಮಸ್ಕಿಟೋ ರೆಪೆಲೆಂಟು, ಹೊಗೆಯಾಡುವ ಬತ್ತಿ ಮುಂತಾದ ಶಸ್ತ್ರಾಸ್ತ್ರಗಳನ್ನು ಹಿಡಿದು ‘ಜ್ಯಾದಾ ಆಸಾನ್, ಜ್ಯಾದಾ ಅಸರ್‌ದಾರ್’ ಎನ್ನುವ ಜಾಹೀರಾತುಗಳನ್ನು ನಂಬಿ ಅವುಗಳನ್ನು ಓಡಿಸಲು ವಿಫಲ ಪ್ರಯತ್ನ ನಡೆಸುವೆವು. ಎಂಥದ್ದೇ ಡೋಲು, ಜಾಗಟೆ, ಶಂಖನಾದಗಳಿಂದ ಎಚ್ಚರವಾಗದಿರುವ ಗೊರಕೆವೀರರು ಕೇವಲ ಒಂದು ಸೊಳ್ಳೆ ಕಿವಿಯ ಹತ್ತಿರ ಬಂದು ಗುಂಯ್‌ಗುಟ್ಟರೆ ಥಟ್ಟನೆ ಎದ್ದೇಳಬಲ್ಲರು. ಸೊಳ್ಳೆ ಹಾಗೂ ಫ್ಯಾನು ಎರಡೂ ಒಂದೇ ರೇಖೆಯ ಎರಡು ಬಿಂದುಗಳು ಎಂದು ನನಗ್ಯಾವತ್ತೂ ಅನ್ನಿಸುವುದು, ಅದರಲ್ಲಂತೂ ಕರೆಂಟು ಹೋದರೆ ಸೆಕೆಯೆಂಬ ಮೂರನೆಯ ಬಿಂದು ಸೇರಿಕೊಂಡು ಕಚ್ಚಿಸಿಕೊಂಡವರಿಗೆ ತ್ರಿಶಂಕುಸ್ಥಿತಿ; ಸೊಳ್ಳೆಗಳಿಗೆ ಮೃಷ್ಟಾನ್ನ ಭೋಜನ. ಹೀಗಾಗಿ ರಾತ್ರಿ ಮಲಗುವಾಗ ಒಂದು ಕಡೆಯಿದ್ದವರು ಏಳುವಾಗ ಇನ್ನೆಲ್ಲಿಂದಲೋ ಎದ್ದರೆ ರಾತ್ರಿ ಸೆಕೆ, ಸೊಳ್ಳೆಗಳ ಉಪಚಾರ ಚೆನ್ನಾಗಿಯೇ ನಡೆದಿರಬೇಕು ಎಂದು ಸುಲಭದಲ್ಲಿ ಊಹಿಸಬಹುದು.

ಇಷ್ಟೊಂದು ಉಪಟಳ ಕೊಡುವ ಸೊಳ್ಳೆಗಳ ಕುರಿತಾಗಿ ಅದೆಷ್ಟು ಅಧ್ಯಯನ ಮಾಡಿಸುತ್ತಾರೆ ಶಾಲೆಗಳಲ್ಲಿ. ನಿಮ್ಮ ಹೆಸರನ್ನು ಮರೆತರೂ ತೊಂದರೆಯಿಲ್ಲ; ಮಲೇರಿಯಾಕ್ಕೆ ಅನಫಿಲಿಸ್, ಡೆಂಗಿಗೆ ಈಡಿಸ್ ಸೊಳ್ಳೆ ಎಂಬ ಈ ಸೊಳ್ಳೆಗಳ ಹೆಸರನ್ನು ಮಾತ್ರ ಮರೆಯಬಾರದು ಎಂದು ಬಾಯಿಪಾಠ ಮಾಡಿಸಿ; ಅವುಗಳ ಲೈಫ್ ಸೈಕಲ್ಲುಗಳನ್ನು ಕಲಿಯದಿದ್ದರೆ ಲೈಫಿನಲ್ಲಿ ನೀವು ಸೈಕಲ್ ಹೊಡೆಯಬೇಕು ಎಂದು ಭಯ ಹುಟ್ಟಿಸಿಬಿಡುತ್ತಾರೆ ಮೇಷ್ಟ್ರುಗಳು, ಆಫ್ಟ್ರಾಲ್ ಸೊಳ್ಳೆಗಳಿಗೆ ಏಕಿಷ್ಟು ಪ್ರಾಮುಖ್ಯ ಎಂದು ನನಗಿನ್ನೂ ಅರ್ಥವಾಗಿಲ್ಲ.

ಅದರ ಜೊತೆಗೆ ಸೊಳ್ಳೆಗಳ ಕುರಿತಾದ ಒಂದು ಸಮಾಧಾನದ ಸಂಗತಿಯನ್ನೂ ಹೇಳಿಕೊಡುವರಲ್ಲ, ಎಲ್ಲ ಸೊಳ್ಳೆಗಳು ಮನುಷ್ಯರನ್ನು ಕಚ್ಚುವುದಿಲ್ಲ ಹಾಗೂ ಹಾಗೆ ಕಚ್ಚುವ ಸೊಳ್ಳೆಗಳು ಮೈವಾಸನೆ, ಮೈಬಣ್ಣ, ರಕ್ತದ ಗುಂಪುಗಳ ಆಧಾರದ ಹುಡುಕಿಕೊಂಡು ಬರುವ ಹೆಣ್ಣುಜಾತಿಗಳಂತೆ. ಅಂದರೆ ಗಂಡು ಸೊಳ್ಳೆಗಳು ಮನುಷ್ಯನ ತಂಟೆಗೆ ಬರುವುದಿಲ್ಲವೆಂದಾಯಿತು. ಆದರೆ ಈ ವಿಚಾರ ತಿಳಿದೂ ಸೊಳ್ಳೆಗಳಿಂದ ಬಚಾವಾಗಲು ನಮ್ಮ ಮೈಬಣ್ಣವನ್ನಾಗಲೀ, ರಕ್ತದ ಗುಂಪನ್ನಾಗಲೀ ಬದಲಾಯಿಸಿಕೊಳ್ಳಲಾಗದು ಎಂಬುದು ಬೇಸರದ ಸಂಗತಿ! ಆದರೆ ಸೊಳ್ಳೆಗಳನ್ನು ಆಕರ್ಷಿಸದೆ ಅವುಗಳ ಕಡಿತದಿಂದ ಪಾರಾದವರು ನಿಜಕ್ಕೂ ಪುಣ್ಯವಂತರೇ!

ಪ್ರತಿಕ್ರಿಯಿಸಿ: **feedback@sudha.co.in**





ವಿಜಯ

## ಜೀವನ ಪಾಠ

ದೇವರು ಜೀವನದಲ್ಲಿ
ಆಗಾಗ ಪಾಠಗಳನ್ನು
ಸರಳವಾಗಿ ಕಲಿಸುತ್ತಾನೆ
ಪಾಠಗಳ ಮರೆತಾಗ
ಕಷ್ಟಗಳ ನೀಡಿ
ಕಠಿಣವಾಗಿ ಕಲಿಸುತ್ತಾನೆ.

—ವೆಂಕಟೇಶ ಚಾಗಿ, ಕೊಪ್ಪಳ